ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಉಪಾಧ್ಯಕ್ಷರೇ, ಕಾಯ್ದಿಟ್ಟ ಅರಣ್ಯ ಪ್ರದೇಶಗಳು ಕ್ರಮೇಣ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದರೆ ಅದಕ್ಕೆ ಸರ್ಕಾರ ಉತ್ತರದಲ್ಲಿ 29,126 ಹೆಕ್ಟೇರ್ ಅರಣ್ಯ ಪ್ರದೇಶ ಬೇರೆ ಬೇರೆ ಅಭಿವೃದ್ಧಿ ಕೆಲಸಗಳಿಗಾಗಿ ವಿನಿಯೋಗವಾಗಿದೆಯೆಂದು ಉತ್ತರ ಕೊಟ್ಟಿದ್ದಾರೆ. ಹಾಗಾದರೆ ಇನ್ನು ಉಳಿದಿರುವ ಅರಣ್ಯ ಪ್ರದೇಶಗಳನ್ನು ರಕ್ಷಿಸಲು ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಂಡಿದೆ ಎಂದು ನನ್ನ ಎರಡನೆಯ ಪ್ರಶ್ನೆಯಲ್ಲಿ ಕೇಳಿದ್ದರೆ ಅದಕ್ಕೆ ಬೇರೆ ಬೇರೆ ಕಾರಣಗಳನ್ನು ಕೊಟ್ಟಿದ್ದಾರೆ. ಆದರೆ ನನಗೆ ಗೊತ್ತಿರುವ ಹಾಗೆ ಅರಣ್ಯ ಪ್ರದೇಶಗಳನ್ನು ನಾವು ಮುಂದಿನಿಂದ ನೋಡಿದರೆ ಮರಗಳು ಹೆಚ್ಚಾಗಿ ಇರುವಂತೆ ಕಾಣುತ್ತದೆ. ಆದರೆ ಒಳಗಡೆ ಹೋದರೆ ಮರಗಳು ನಾಶವಾಗಿರುತ್ತವೆ. ಎಲ್ಲವನ್ನೂ ಕದ್ದು ಮಾರಾಟ ಮಾಡಿ ಹಾಳುಮಾಡುತ್ತಿದ್ದಾರೆ. ಅದನ್ನು ಸಂಪೂರ್ಣವಾಗಿ ರಕ್ಷಣೆ ಮಾಡುವಂಥ ಕ್ರಮ ಸರ್ಕಾರದಲ್ಲಿದೆಯೇ? ಏಕೆಂದರೆ ಅರಣ್ಯ ಪ್ರದೇಶಗಳು ನಾಶವಾಗಿ ಪ್ರಕೃತಿ ಸಮತೋಲನ ಸಂಪೂರ್ಣವಾಗಿ ಕೆಟ್ಟುಹೋಗಿದೆ. ಪ್ರಕೃತಿಯ ಸಮತೋಲನ ಕೆಟ್ಟಮೇಲೆ ಮಳೆ ಬರುವುದು ವ್ಯತ್ಯಾಸವಾಗುತ್ತದೆ ಮತ್ತು ಸೆಖೆ ಜಾಸ್ತಿಯಾಗುತ್ತದೆ. ಆದುದರಿಂದ, ಸರ್ಕಾರ ಅರಣ್ಯ ಪ್ರದೇಶಗಳನ್ನು ರಕ್ಷಿಸುವ ಸಲುವಾಗಿ ಏನೇನು ಕ್ರಮವನ್ನು ತೆಗೆದುಕೊಂಡಿದೆ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಕಳ್ಳತನವಾಗುತ್ತಿರುವುದರಿಂದ ಅದನ್ನು ನಿಲ್ಲಿಸುವುದಕ್ಕೆ ನಾವು ಕಟ್ಟುನಿಟ್ಟಿನ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಈ ಕುರಿತ ಕಾಯ್ದೆಗೆ ಮೊನ್ನೆ ತಾನೇ ತಿದ್ದುಪಡಿ ತಂದಿದ್ದು ತಪ್ಪಿತಸ್ಥರಿಗೆ ಐದು ಸಾವಿರ ರೂಪಾಯಿಗಳಿಂದ ಐವತ್ತು ಸಾವಿರ ರೂಪಾಯಿಗಳವರೆಗೂ ದಂಡ ವಿಧಿಸುವಂತೆ ಕಾನೂನು ಮಾಡಿದ್ದೇವೆ. ದಂಡ ವಿಧಿಸುವುದರಿಂದಲಾದರೂ ತಡೆಗಟ್ಟಬಹುದೆಂಬ ಉದ್ದೇಶದಿಂದ ತಂದಿದ್ದೇವೆ. ಆದರೂ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಕೊಡಗು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಮಾತ್ರ ಇದು ನಡೆಯುತ್ತಿರುವುದರಿಂದ, ಸಾಧ್ಯವಾದಷ್ಟು ನಾವೂ ಸಹ ಕಂಟ್ರೋಲ್ ಮಾಡಿದ್ದು, ಅದು ಆಗದ ರೀತಿಯಲ್ಲಿ ತಡೆಗಟ್ಟುವುದಕ್ಕೆ ಪ್ರಯತ್ನಿಸುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯಲ್ಲಿ ಟಾರು ಕೊರತೆ

192 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯಲ್ಲಿ ಟಾರು ಕೊರತೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಎಂ.ಆರ್.ಪಿ.ಎಲ್.ನಲ್ಲಿ ಟಾರು ಉತ್ಪಾದನೆ ಯಾಗುತ್ತಿದ್ದರೂ ಅಲ್ಲಿ ಖರೀದಿಸದಿರಲು ಕಾರಣವೇನು?*

ಇ) *ಗುತ್ತಿಗೆ ಅವಧಿ ಒಳಗೆ ಟಾರು ಒದಗಿಸದಿದ್ದಲ್ಲಿ ಗುತ್ತಿಗೆದಾರರಿಗೆ ಕ್ಲೇಮ್ ಹಾಕಲು ಅವಕಾಶ ನೀಡದಂತಾಗುವುದಿಲ್ಲವೇ?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಮಂಗಳೂರು ವಿಭಾಗಕ್ಕೆ ಅಗತ್ಯವಿರುವ ಡಾಂಬರನ್ನು ಮಂಗಳೂರಿನಲ್ಲಿರುವ ಎಂ.ಆರ್.ಪಿ.ಎಲ್.ನಿಂದ ಮಾತ್ರ ಖರೀದಿಸಲಾಗುತ್ತಿದೆ.

ಇ) ಇಲ್ಲ. ಗುತ್ತಿಗೆ ಕರಾರಿನ ಪ್ರಕಾರ ಸಾಮಗ್ರಿ ಒದಗಿಸದಿದ್ದಲ್ಲಿ, ಹೆಚ್ಚುವರಿ ಕೋರಲು ಅವಕಾಶವಿರುವುದಿಲ್ಲ.

ಶ್ರೀ ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ಟಾರು ಕೊರತೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಸಂಪೂರ್ಣ ಸ್ಥಗಿತಗೊಂಡಿದೆ. ಕಾರಣ ತಮಗೆ ಗೊತ್ತಿದೆ, ಅಲ್ಲಿ ಟಾರು ಇಲ್ಲ. ಅದರೂ ಅಲ್ಲಿ ಏಕೆ ಇಲಾಖೆಯನ್ನು ಇಟ್ಟುಕೊಂಡಿದ್ದೀರಿ? ಏನು ಕೆಲಸವಿಲ್ಲದೆ ಕೇವಲ ಸಂಬಳ ಕೊಡತಕ್ಕಂಥ ವ್ಯವಸ್ಥೆ ಏಕೆ? ಅಲ್ಲಿರುವವರನ್ನೆಲ್ಲಾ ಬೇರೆಡೆ ಕಳುಹಿಸಿ, ಇಲ್ಲದಿದ್ದರೆ ಟಾರು ಸೌಲಭ್ಯ ಒದಗಿಸಿಕೊಡಿ. ನಾನು ಕೇಳಿರುವ ಮೂರನೇ ಪ್ರಶ್ನೆಗೆ ಉತ್ತರವಾಗಿ, ಗುತ್ತಿಗೆ ಕರಾರಿನ ಪ್ರಕಾರ ಸಾಮಗ್ರಿ ಒದಗಿಸದಿದ್ದಲ್ಲಿ ಹೆಚ್ಚುವರಿ ಕೋರಲು ಅವಕಾಶವಿರುವುದಿಲ್ಲವೆಂದು ತಿಳಿಸಿದ್ದಾರೆ. ಅಂದರೆ, ಕ್ಲೇಮ್ ಹಾಕುವುದಕ್ಕೆ ಅವಕಾಶವಿಲ್ಲ, ಕೆಲಸ ಮಾಡದಿರುವುದಕ್ಕೆ ಅವಕಾಶ ಜಾಸ್ತಿ ಇದೆ. ಯಾವುದೇ ಒಂದು ಕಾಮಗಾರಿ ಪ್ರಾರಂಭಿಸುವ ಮುಂಚೆ, ಟೆಂಡರ್ ಕರೆಯುವುದಕ್ಕಿಂತ ಮುಂಚಿತವಾಗಿ ಮೂರನೇ ಒಂದು ಭಾಗದಷ್ಟು ಹಣವನ್ನು ಕಾಂಟಿರಿಸಿಕೊಂಡು ಟೆಂಡರ್ ಕರೆಯಬೇಕು. ಹಾಗೆ ಟೆಂಡರ್ ಕರೆಯುವುದನ್ನು ಬಿಟ್ಟು ಒಂದು ನಯಾ ಪೈಸೆ ಕೊಡದಿರುವುದರಿಂದ ಅವರು ಕೆಲಸ ಮಾಡಿಲ್ಲ, ಕೆಲಸ ಆಗುವುದಿಲ್ಲ, ಕೆಲಸ ಆಗತಕ್ಕಂಥ ವ್ಯವಸ್ಥೆಗೆ ಕೊಡುವುದಕ್ಕಾಗುವುದಿಲ್ಲ. ಇಂತಹ ಇಲಾಖೆಯಲ್ಲಿ ತಾವು ಕುಳಿತುಕೊಳ್ಳುವುದೂ ಸರಿಯಲ್ಲ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಉಪಾಧ್ಯಕ್ಷರೆ, 1997-98ನೇ ಸಾಲಿನಲ್ಲಿ ಮಂಗಳೂರು ವಿಭಾಗಕ್ಕೆ ಅಗತ್ಯವಿರುವಂಥ ಟಾರನ್ನು ಖರೀದಿಸುವುದಕ್ಕೆ ಸಾಧ್ಯವಾಗಿಲ್ಲ. ಆದರೆ, ಮಾನ್ಯ ಸದಸ್ಯರು ಟಾರ್ ಒದಗಿಸಿಲ್ಲವೆಂದು ಹೇಳಿರುವುದು ಸತ್ಯಕ್ಕೆ ದೂರವಾದುದೆಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತಿದ್ದೇನೆ. 1997-98ನೇ ಸಾಲಿಗೆ 2,024 ಮೆಟ್ರಿಕ್ ಟನ್‌ಗಳಷ್ಟು ಡಾಂಬರನ್ನು ಖರೀದಿಸಿದು, ಸರಬರಾಜಾಗಿರುವ ಡಾಂಬರನ್ನು ಎಂ.ಆರ್.ಪಿ.ಎಲ್.ನಿಂದಲೇ ಖರೀದಿಸಿರುವುದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಇನ್ನುಳಿದ ಡಾಂಬರನ್ನು ಈ ತಿಂಗಳಿನಲ್ಲಿಯೇ ಖರೀದಿಸುವ ವ್ಯವಸ್ಥೆ ಮಾಡಿದ್ದೇವೆ, ಮತ್ತು ಇದಕ್ಕೆ ಈಗಾಗಲೇ ಹಣ ಕೂಡ ಬಿಡುಗಡೆಯಾಗಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಈಗ ಉದ್ಭವಿಸಿರುವ ಪ್ರಶ್ನೆಯೇನೆಂದರೆ, ನಾನು ತಮ್ಮ ಹತ್ತಿರ ಅರಿಕೆ ಮಾಡಿಕೊಳ್ಳುವುದಿಷ್ಟೇ, ಮಳೆಯಿಂದ ಹಾನಿಗೊಂಡ ಆಯ್ದ ಭಾಗಗಳಿಗೆ ದುರಸ್ತಿ ಹಾಗೂ ಡಾಂಬರೀಕರಣಕ್ಕೆ ಟೆಂಡರ್ ಕರೆದಿದ್ದೀರಾ? ಇನ್ನೊಂದು ಮಳೆಗಾಲದವರೆವಿಗೂ ನಿಮಗೆ ಅದನ್ನು ದುರಸ್ತಿ ಮಾಡುವುದಕ್ಕಾಗದಿದ್ದರೆ, ಟಾರನ್ನು ಒದಗಿಸುವುದಕ್ಕಾದಿದ್ದರೆ ಅದನ್ನಾದರೂ ಹೇಳಿ.

ಶ್ರೀ ಸಿ.ಎಂ. ಉದಾಸಿ : ಇದನ್ನು ಮೇ ತಿಂಗಳೊಳಗೆ ಸಂಪೂರ್ಣ ಮುಗಿಸುವಂಥ ಕೆಲಸ ಮಾಡುತ್ತೇವೆ, ಈ ನಿಟ್ಟಿನಲ್ಲಿ ಮಾನ್ಯ ಸದಸ್ಯರು ದಯಮಾಡಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಇದು ಚೌಕಾಸಿ ಮಾಡುವುದಲ್ಲ.

ಉಪಾಧ್ಯಕ್ಷರು : ಮೇ ತಿಂಗಳೊಳಗೆ ಮುಗಿಸಿಕೊಡುತ್ತೇನೆಂದು ಸಚಿವರು ಹೇಳಿದ್ದಾರಲ್ಲ. ಪ್ರತಾಪಚಂದ್ರಶೆಟ್ಟಿಯವರೆ, ನೀವು 2-3 ಬಾರಿ ವಿಧಾನಸಭೆಗೆ ಆರಿಸಿ ಬಂದಿದ್ದೀರಿ. ನೀವು ಹೇಳಿದಂತೆ ಅವರು ಉತ್ತರ ಕೊಡುವುದಕ್ಕಾಗುವುದಿಲ್ಲ. ಅವರು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾನು ಅದಲ್ಲ ಕೇಳುವುದು. ಇದರಲ್ಲಿ ಚೌಕಾಸಿ ಮಾಡತಕ್ಕಂಥಾದ್ದೇನೂ ಇಲ್ಲ.

ಉಪಾಧ್ಯಕ್ಷರು : ಅವರು ಚೌಕಾಸಿ ಎಂದು ಹೇಳಲಿಲ್ಲ, ನೀವೇಕೆ ತಲೆ ಕೆಡಿಸಿಕೊಳ್ಳುತ್ತೀರಿ. ಮೇ ತಿಂಗಳೊಳಗೆ ಕೆಲಸ ಮುಗಿಸಿಕೊಡುವುದಾಗಿ ಹೇಳಿದ್ದಾರೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಉಪಾಧ್ಯಕ್ಷರೆ, ಅತಿ ಶೀಘ್ರದಲ್ಲಿಯೇ ಮುಗಿಸಬೇಕೆನ್ನುವ ಗುರಿಯಿಂದ ಟಾರ್ ಖರೀದಿಗಾಗಿ ಇವೊತ್ತು ಹಣ ಬಿಡುಗಡೆ ಮಾಡಲಾಗಿದೆ.

ಗುಳೇದಗುಡ್ಡ ನಗರದಲ್ಲಿ ಅರಣ್ಯ ನರ್ಸರಿ.

193 - ಶ್ರೀ ರಾಜಶೇಖರ ವಿ. ಶೀಲವಂತ (ಗುಳೇದಗುಡ್ಡ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅರಣ್ಯ ಇಲಾಖೆಯಿಂದ ಗುಳೇದಗುಡ್ಡ ನಗರದಲ್ಲಿ ನರ್ಸರಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದವರ ಮುಂದಿದೆಯೇ?*

ಆ) *ಇದ್ದರೆ, ಅದರ ಅಂದಾಜು ವೆಚ್ಚ ಎಷ್ಟು? ಅದಕ್ಕಾಗಿ 1998-99ನೇ ಸಾಲಿಗೆ ಎಷ್ಟು ಹಣ ಒದಗಿಸಲಾಗಿದೆ? ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ಹೌದು.

ಆ) ಅಂದಾಜು ವೆಚ್ಚ ಪಟ್ಟಿಯನ್ನು ತಯಾರಿಸಲಾಗುತ್ತಿದೆ. 1998-99ನೇ ಸಾಲಿನಲ್ಲಿ ರೂ. 1 ಲಕ್ಷ ಅನುದಾನವನ್ನು ಒದಗಿಸಲಾಗಿದೆ ಮತ್ತು ಕೆಲಸವನ್ನು ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

ಶ್ರೀ ರಾಜಶೇಖರ ವಿ. ಶೀಲವಂತ : ಮಾನ್ಯ ಉಪಾಧ್ಯಕ್ಷರೆ, ನಾನು ಹೇಳಿರುವ ಪ್ರಶ್ನೆಗಳಿಗೆ ಸಚಿವರು ಉತ್ತರ ಒದಗಿಸಿದ್ದು, ಉತ್ತರದಲ್ಲಿ ಅಂದಾಜು ವೆಚ್ಚ ಪಟ್ಟಿಯನ್ನು ತಯಾರಿಸಲಾಗುತ್ತಿದೆ. 1998-99ನೇ ಸಾಲಿನಲ್ಲಿ ಒಂದು ಲಕ್ಷ ರೂಪಾಯಿ ಅನುದಾನ ಒದಗಿಸಿಲಾಗಿದ್ದು ಕೆಲಸವನ್ನು ಈ